ಕರ್ನಾಟಕ ಉಚ್ಚ ನ್ಯಾಯಾಲಯ

ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎನ್.ಎಸ್. ಸಂಜಯ್ ಗೌಡ

ಶ್ರೀ ಎಸ್. ರಾಮಕೃಷ್ಣ -ವಿರುದ್ಧ-ಎಸ್.ಅಪ್ಪಯ್ಯ ಮತ್ತು ಇತರರು

ಆರ್.ಎಸ್.ಎ.ಸಂಖ್ಯೆ: 1359/2016 ಇದರೊಂದಿಗೆ ಇತರೆ, ದಿನಾಂಕ 16 ನೇ ಮಾರ್ಚ್, 2020.

ತೀರ್ಪು

ನ್ಯಾಯಮೂರ್ತಿ ಶ್ರೀ ಎನ್.ಎಸ್. ಸಂಜಯ್ ಗೌಡ:

1. ಸಹೋದರರಾದ ಎಂದರೆ, ವಾದಿ ಮತ್ತು 3 ನೇ ಪ್ರತಿವಾದಿಯು ವಿಭಜನೆಗೆ ಸಂಬಂಧಿಸಿದ ದಾವೆಯಲ್ಲಿ ಪರಸ್ಪರ ಸಮರ್ಥಿಸಿಕೊಂಡಿದ್ದು, ಅಪೀಲು ನ್ಯಾಯಾಲಯವು ತಮ್ಮ ಅಪೀಲನ್ನು ವಜಾ ಮಾಡಿರುವುದನ್ನು ಪ್ರಶ್ನಿಸಿ, ಎರಡನೇ ಅಪೀಲನ್ನು ಸಲ್ಲಿಸಿದ್ದಾರೆ.

2. ಈ ಎರಡೂ ಅಪೀಲುಗಳು, ಮೂಲ ದಾವೆಸಂಖ್ಯೆ: 640/2004 ಮತ್ತು ಆರ್.ಎ.ಸಂಖ್ಯೆ: 64/2013 ರಲ್ಲಿ ಹೊರಡಿಸಿದ ಒಂದೇ ತೀರ್ಪು ಮತ್ತು ಡಿಕ್ರಿಯಿಂದ ಉದ್ಭವಿಸಿರುವುದರಿಂದಾಗಿ, ಅವುಗಳನ್ನು ವಿಲೇ ಮಾಡಲು ಒಟ್ಟಿಗೆ ಕೈಗೆತ್ತಿಕೊಳ್ಳಲಾಗಿದೆ.ಸುಬ್ಬಯ್ಯ ಎಂಬುವವರಿಗೆ ನಾಲ್ಕು ಮಂದಿ ಗಂಡು ಮಕ್ಕಳು,

1) ಎಸ್. ನಾರಾಯಣಪ್ಪ (ಪ್ರತಿವಾದಿಸಂಖ್ಯೆ: 1)

2) ಎಸ್. ಅಪ್ಪಯ್ಯ (ವಾದಿ)

3) ವೆಂಕಸುಬ್ಬಯ್ಯ (ಪ್ರತಿವಾದಿ ಸಂಖ್ಯೆ .2) ಮತ್ತು

4) ಎಸ್. ರಾಮಕೃಷ್ಣ (ಪ್ರತಿವಾದಿಸಂಖ್ಯೆ: 3)

3. ಬೆಂಗಳೂರು ಪೂರ್ವ ತಾಲ್ಲೂಕಿನ ಬಿದರಹಳ್ಳಿ ಹೋಬಳಿಯ ಕನ್ನಮಂಗಲ ಗ್ರಾಮದಲ್ಲಿರುವ, 2 ಎಕರೆಗಳ ವಿಸ್ತೀರ್ಣದ ಸರ್ವೆಸಂಖ್ಯೆ: 145/2 ಪಿ .2 ನ್ನು ಹೊಂದಿರುವ ಸ್ವತ್ತಿನ ವಿಭಜನೆ ಮತ್ತು ಪ್ರತ್ಯೇಕ ಸ್ವಾಧೀನಕ್ಕಾಗಿ ಕೋರಿ, ಎಸ್. ಅಪ್ಪಯ್ಯ ದಾವೆಯನ್ನು ಹೂಡಿದ್ದಾರೆ.ದಾವಾ ಸ್ವತ್ತನ್ನು ಅವಿಭಕ್ತ ಕುಟುಂಬದ ಆದಾಯದಿಂದ, ಅವನ ಅಣ್ಣನಾದ ಎಸ್. ನಾರಾಯಣಪ್ಪ (ಪ್ರತಿವಾದಿಸಂಖ್ಯೆ: 1) ರವರ ಹೆಸರಿನಲ್ಲಿ ಖರೀದಿಸಲಾಗಿತ್ತು ಮತ್ತು ಆದುದರಿಂದ, ಅದು ಅವಿಭಕ್ತ ಕುಟುಂಬದ ಸ್ವತ್ತಾಗಿತ್ತು ಎಂಬುದು ಅವನ ವಾದವಾಗಿತ್ತು.ಅಷ್ಟೇ ಅಲ್ಲದೆ, ಅದು ಅವಿಭಕ್ತ ಕುಟುಂಬದ ಸ್ವತ್ತಾಗಿದ್ದುದರಿಂದ ಅವನು ಅದರಲ್ಲಿ 1/4 ಭಾಗಕ್ಕೆ ಹಕ್ಕುಳ್ಳವನಾಗಿದ್ದನು ಎಂದು ವಾದಿಸಿದ್ದಾನೆ.

4. ಎಸ್. ನಾರಾಯಣಪ್ಪ ಮತ್ತು ವೆಂಕಸುಬ್ಬಯ್ಯನವರು ( 1 ನೇ ಮತ್ತು 2 ನೇ ಪ್ರತಿವಾದಿಗಳು) ದಾವೆಯನ್ನು ಪ್ರತಿವಾದಿಸಿದರು.ದಿನಾಂಕ: 06.05.1989 ರ (ನಿಶಾನೆ ಡಿ -1) ನೋಂದಾಯಿತ ವಿಭಜನಾ ಪತ್ರದ ಮೂಲಕ ಸ್ವತ್ತು ನಾಲ್ಕು ಮಂದಿ ಸಹೋದರರ ನಡುವೆ ವಿಭಜನೆ ಮಾಡಿಕೊಳ್ಳಲಾಗಿತ್ತು.ಅದರ ಪ್ರಕಾರ ಸ್ವತ್ತುಗಳ ವಿಭಜನೆಯಾಗಿದ್ದು, ಸಹೋದರರಲ್ಲಿ ಪ್ರತಿಯೊಬ್ಬರಿಗೂ ಸ್ವತ್ತುಗಳನ್ನು ಹಂಚಿಕೆ ಮಾಡಲಾಯಿತು ಎಂದು ಅವರು ವಾದಿಸಿದರು.ಸದರಿ ವಿಭಜನೆಯ ಮೇರೆಗೆ ದಾವಾ ಸ್ವತ್ತನ್ನು 1 ನೇ ಪ್ರತಿವಾದಿಗೆ ಹಂಚಿಕೆ ಮಾಡಲಾಗಿತ್ತು

ಮತ್ತು ಆದ್ದರಿಂದ, ವಾದಿ ಮತ್ತು 3 ನೇ ಪ್ರತಿವಾದಿ ವಿಭಜನಾ ಪತ್ರಕ್ಕೆ ಪಕ್ಷಕಾರರಾಗಿದ್ದು, ಅವರು ದಾವಾ ಸ್ವತ್ತಿನಲ್ಲಿ ಪಾಲನ್ನು ಪಡೆಯಲು ಹಕ್ಕುಳ್ಳವರಾಗಿದ್ದರು ಎಂದು ವಾದಿಸಲಾಗುವುದಿಲ್ಲ ಎಂದು ಹೇಳಲಾಯಿತು.

5. ಎಸ್. ರಾಮಕೃಷ್ಣ ( 3 ನೇ ಪ್ರತಿವಾದಿ) ವಾದಿಯ ಕ್ಲೇಮನ್ನು ಸಮರ್ಥಿಸಿ, ಪಾಲನ್ನು ಸಹ ಕ್ಲೇಮು ಮಾಡಿದ್ದರು.

6. ಅಧಿವಿಚಾರಣಾ ನ್ಯಾಯಾಲಯವು, ಸಾಕ್ಷ್ಯಗಳನ್ನು ಪರಿಗಣಿಸಿ, ವಿಭಜನಾ ಪತ್ರದಲ್ಲಿ ಕಾರ್ಯಗತಗೊಳಿಸಿರುವುದನ್ನು ನಿರಾಕರಿಸಿದ ಕಾರಣ, ಮತ್ತು ಅದನ್ನು ಸಾಬೀತುಪಡಿಸಲು ದಾಖಲೆಯ ಸಾಕ್ಷಿಗಳನ್ನು ವಿಚಾರಣೆ ಮಾಡಿಲ್ಲದಿರುವುದರಿಂದ ನೋಂದಾಯಿತ ವಿಭಜನಾ ಪತ್ರ (ನಿಶಾನೆ ಡಿ .1) ಸಾಬೀತಾಗಿಲ್ಲ ಎಂಬ ತೀರ್ಮಾನಕ್ಕೆ ಬಂದಿತು.ಅದಕ್ಕನುಸಾರವಾಗಿ ಅಧಿವಿಚಾರಣಾ ನ್ಯಾಯಲಯವು ದಾವೆಯನ್ನು ಡಿಗ್ರಿಗೊಳಿಸಿತು.

7. 1ನೇ ಮತ್ತು 2 ನೇ ಪ್ರತಿವಾದಿಗಳು (ಎಸ್. ನಾರಾಯಣಪ್ಪ ಮತ್ತು ವೆಂಕಸುಬ್ಬಯ್ಯ) ಅಪೀಲಿನಲ್ಲಿ ವಿಭಜನೆಯ ಈ ಡಿಕ್ರಿಯನ್ನು ಪ್ರಶ್ನಿಸಿದರು.

8. ಅಪೀಲು ನ್ಯಾಯಾಲಯವು, ಸಂಪೂರ್ಣ ಸಾಕ್ಷ್ಯದ ಗುಣಾವಗುಣಗಳನ್ನು ಮರುವಿವೇಚಿಸಿದ ನಂತರ, ಕುಟುಂಬದ ಸ್ವತ್ತುಗಳನ್ನುದಿನಾಂಕ: 06.01.1989 ರ (ನಿಶಾನೆ ಡಿ .1) ನೋಂದಾಯಿತ ವಿಭಜನಾ ಪತ್ರದ ಮೇರೆಗೆ ವಿಭಜಿಸಲಾಗಿರುತ್ತದೆ ಮತ್ತು ಸದರಿ ವಿಭಜನೆಯಲ್ಲಿ ದಾವಾ ಸ್ವತ್ತನ್ನು ಎಸ್. ನಾರಾಯಣಪ್ಪನವರಿಗೆ ( 1 ನೇ ಪ್ರತಿವಾದಿ) ಹಂಚಿಕೆ ಮಾಡಲಾಗಿರುತ್ತದೆ ಮತ್ತು ಅದನ್ನೇ ಇನ್ನೊಮ್ಮೆ ವಿಭಜನೆಗೆ ಒಳಪಡಿಸಲಾಗುವುದಿಲ್ಲ ಎಂಬ ನಿರ್ಣಯಕ್ಕೆ ಬಂದಿದೆ.

9. ವಾದಿ ಮತ್ತು 3 ನೇ ಪ್ರತಿವಾದಿ ವಿಭಜನಾ ಪತ್ರವನ್ನು ಕಾರ್ಯಗತಗೊಳಿಸಿಲ್ಲ ಎಂಬ ವಾದದ ಮಟ್ಟಿಗೆ, ವಾದಿ ಮತ್ತು 3 ನೇ ಪ್ರತಿವಾದಿಯು ಬೆರಳು ಮುದ್ರಣ ತಜ್ಞರ ನೇಮಕ ಮಾಡುವಂತೆ ಕೋರಿದ್ದರು ಮತ್ತು ಅದನ್ನು ಮಂಜೂರು ಮಾಡಿ ಬೆರಳು ಮುದ್ರಣ ತಜ್ಞರನ್ನು ನೇಮಿಸಲಾಯಿತು ಎಂಬ ಸಂಗತಿಯನ್ನು ಅಪೀಲು ನ್ಯಾಯಾಲಯವು ಗಮನಕ್ಕೆ ತೆಗೆದುಕೊಂಡಿದೆ.ಬೆರಳು ಮುದ್ರಣ ವರದಿಯಿಂದ ವಿಭಜನಾ ಪತ್ರದಲ್ಲಿ (ನಿಶಾನೆ ಡಿ .1) ಕಂಡುಬಂದ ಸಹಿಗಳು ನಿಜಕ್ಕೂ ವಾದಿಯ ಮತ್ತು 3 ನೇ ಪ್ರತಿವಾದಿಯ ಸಹಿಗಳಾಗಿದ್ದವು ಎಂದು ತಿಳಿದುಬರುತ್ತದೆ.ಆದುದರಿಂದ, ವಿಭಜನಾ ಪತ್ರವು ಸಾಬೀತಾಗಿದೆ ಹಾಗೂ ಇದರ ಪರಿಣಾಮವಾಗಿ, ಅಧಿವಿಚಾರಣಾ ನ್ಯಾಯಾಲಯದ ಡಿಕ್ರಿಯನ್ನು ಸಮರ್ಥಿಸಿಕೊಳ್ಳಲು ಸಾಧ್ಯವಾಗಲಿಲ್ಲ ಎಂಬುದು ಗಮನಾರ್ಹ ಸಂಗತಿ.ತದನುಸಾರವಾಗಿ, ಅಪೀಲು ನ್ಯಾಯಾಲಯವು ಅಪೀಲನ್ನು ಪುರಸ್ಕರಿಸಲು ಮತ್ತು ದಾವೆಯನ್ನು ವಜಾಗೊಳಿಸಲು ಮುಂದಾಯಿತು.

10. ಈ ಡಿಗ್ರಿಯು ಈ ಎರಡನೆಯ ಅಪೀಲಿನಲ್ಲಿ ಪ್ರಶ್ನಿಸಿರುವ ದಾವೆಯನ್ನು ವಜಾಗೊಳಿಸುವ ಡಿಗ್ರಿಯಾಗಿದೆ.

11. ಬೆರಳು ಮುದ್ರಣ ತಜ್ಞರನ್ನು ಅಧಿವಿಚಾರಣಾ ನ್ಯಾಯಾಲಯವು ವಿಚಾರಣೆಗೆ ಒಳಪಡಿಸದ ಕಾರಣ, ಅಪೀಲು ನ್ಯಾಯಾಲಯವು ಮೊಕದ್ದಮೆಯನ್ನು ವಜಾಗೊಳಿಸಲು ಸಾಧ್ಯವಿಲ್ಲ ಮತ್ತು ಇದು ಅಪೀಲು ನ್ಯಾಯಾಲಯದ ತೀರ್ಪನ್ನು ನಿರರ್ಥಕಗೊಳಿಸಿತು ಎಂದು ಅಪೀಲುದಾರರ ಪರ ಮಾನ್ಯ ವಕೀಲರು ವಾದಿಸಿದರು.ಸ್ವತಃ ತಜ್ಞರ ಸಾಕ್ಷ್ಯ ಮಾತ್ರದಿಂದಲೇ ವಿಭಜನಾ ಪತ್ರವು ಸಾಬೀತಾಗಿದೆ ಎಂಬ ತೀರ್ಮಾನಕ್ಕೆ ಬರಲು ಸಾಧ್ಯವಾಗುವುದಿಲ್ಲ ಎಂದು ಅವರು ವಾದಿಸಿದರು.ಮುಂದುವರೆಸುತ್ತಾ, ದಾಸ್ತಾವೇಜನ್ನು ಕಾರ್ಯಗತಗೊಳಿಸುವುದನ್ನು

ನಿರಾಕರಿಸಿದಾಗಲೆಲ್ಲಾ, ದಸ್ತಾವೇಜನ್ನು ದೃಢೀಕರಿಸುವ ಸಾಕ್ಷಿಗಳಿದ್ದರೆ, ಸದರಿ ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸುವುದು ಅಗತ್ಯವಾಗಿತ್ತು ಮತ್ತು ಸಾಕ್ಷಿಗಳನ್ನು ವಿಚಾರಣೆಗೆ ಒಳಪಡಿಸಲಾಗದಿದ್ದರೆ, ಆಗ ದಸ್ತಾವೇಜು ಸಾಬೀತಾಗಿಲ್ಲ ಎಂಬ ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ ಎಂದು ವಾದಿಸಿದ್ದಾರೆ.

12. ಈ ಸಂದರ್ಭದಲ್ಲಿ ಅಪ್ಪಯ್ಯ ಎಂಬುವವರು ದಾವೆಯ ಸ್ವತ್ತು ಒಂದು ಅವಿಭಕ್ತ ಕುಟುಂಬದ ಸ್ವತ್ತಾಗಿದೆ ಎಂದು ವಾದಿಸಿ ವಿಭಜನೆಗಾಗಿ ದಾವೆಯನ್ನು ಹೂಡಿದರು ಮತ್ತು ಈ ಕ್ಲೇಮಿನ ಪ್ರತಿವಾದವೆಂದರೆ ನೋಂದಾಯಿತ ದಸ್ತಾವೇಜಿನ ಮೂಲಕ ಈಗಾಗಲೇ ಒಂದು ವಿಭಜನೆಯನ್ನು ಮಾಡಿಕೊಳ್ಳಲಾಗಿದ್ದು ಅದರಲ್ಲಿ ವಾದಿಯು ಸ್ವತಃ ಒಬ್ಬ ಪಕ್ಷಕಾರನಾಗಿದ್ದನು ಮತ್ತು ಆದ್ದರಿಂದ, ದಾವೆಯನ್ನು ಸಮರ್ಥಿಸಲು ಸಾಧ್ಯವಾಗಲಿಲ್ಲ ಎಂಬುದಾಗಿತ್ತು.

13. ಕಾನೂನಿನಲ್ಲಿ, ಯಾರೇ ವ್ಯಕ್ತಿಯು ಒಂದು ದಸ್ತಾವೇಜಿನಲ್ಲಿ ಸಹಿ ಮಾಡಿರುವನೆಂದು ಆಪಾದಿಸಲಾಗಿದ್ದರೆ, ಆ ಸಹಿಯನ್ನು ಸಾಬೀತು ಮಾಡಬೇಕು (ಭಾರತ ಸಾಕ್ಷ್ಯ ಎಣಿ ಅಧಿನಿಯಮ, 1872 ರ 47 ನೆಯ ಪ್ರಕರಣ).

14. ನ್ಯಾಯಾಲಯವು, ಆಪಾದಿಸಲಾದ ಸಹಿಯು ಯಾವ ವ್ಯಕ್ತಿಯು ಮಾಡಬೇಕೆಂದು ಉದ್ದೇಶಿಸಲಾಗಿತ್ತೋ ಆ ವ್ಯಕ್ತಿಯದಾಗಿತ್ತೇ ಎಂಬುದನ್ನು ನಿರ್ಧರಿಸುವ ಸಲುವಾಗಿ ಈ ನ್ಯಾಯಾಲಯವು ಸಹಿಯ ಅಧಿಕೃತತೆಯ ಬಗ್ಗೆ ಸ್ವತಃ ಮನವರಿಕೆ ಮಾಡಿಕೊಳ್ಳಲು ವಿವಾದಿತ ಸಹಿಯನ್ನು ಮತ್ತು ಅಂಗೀಕೃತ ಸಹಿಯನ್ನು ತುಲನೆ ಮಾಡಿ ನೋಡಬಹುದು.(ಭಾರತ ಸಾಕ್ಷ್ಯ ಎ ಅಧಿನಿಯಮ, 1872 ರ 73ನೆಯ ಪ್ರಕರಣ)

15. ಸಹಿಯನ್ನು ಸಾಬೀತುಪಡಿಸುವ ಇನ್ನೊಂದು ವಿಧಾನವೆಂದರೆ, ಕೈಬರಹ ತಜ್ಞರ ಅಭಿಪ್ರಾಯವನ್ನು ಪಡೆಯುವುದಾಗಿದೆ.

16. ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ 10- ಎ, ಕ್ರಮಾದೇಶ XXVI ರ ಉಪಬಂಧಗಳ ಅಡಿಯಲ್ಲಿ ಬೆರಳು ಮುದ್ರಣ ತಜ್ಞರ ಮೂಲಕ ವೈಜ್ಞಾನಿಕ ತನಿಖೆ ನಡೆಸಲು ಆದೇಶವನ್ನು ಹೊರಡಿಸಲು ಈ ನ್ಯಾಯಾಲಯಕ್ಕೆ ಅಧಿಕಾರವಿದೆ ಮತ್ತು ಅಂತಹ ಕ್ರಮವನ್ನು ಅಳವಡಿಸಿಕೊಂಡರೆ, ವಿವಾದಿತ ಸಹಿ ಮತ್ತು ಅಂಗೀಕೃತ ಸಹಿಯನ್ನು ವೈಜ್ಞಾನಿಕ ತನಿಖೆಗಾಗಿ ಕಳುಹಿಸಲಾಗುತ್ತದೆ ಮತ್ತು ತಜ್ಞರು ಅಂತಹ ತನಿಖೆಯನ್ನು ನಡೆಸಿ ವರದಿಯನ್ನು ಸಲ್ಲಿಸಿದ ತರುವಾಯ, ನ್ಯಾಯಾಲಯವು ವರದಿಯನ್ನು ಪರಿಗಣಿಸಿ ಸಹಿಯ ನೈಜತೆಯ ಬಗ್ಗೆ ತೀರ್ಪು ನೀಡಲು ಮುಂದುವರಿಯಬಹುದು.

17. ಸಿವಿಲ್ ಪ್ರಕ್ರಿಯಾ ಸಂಹಿತೆಯ ನಿಯಮ 10 ( 2), ಕ್ರಮಾದೇಶ XXVI ರ ಅಡಿಯಲ್ಲಿ, ತಜ್ಞರು ವರದಿಯನ್ನು ಸಲ್ಲಿಸಿದಾಗಲೆಲ್ಲಾ ಆ ವರದಿಯು ದಾವೆಯಲ್ಲಿ ಸಾಕ್ಷಿಯಾಗುತ್ತದೆ ಮತ್ತು ಅದು ದಾಖಲೆಯ ಒಂದು ಭಾಗವಾಗತಕ್ಕದ್ದು ಎಂಬುದನ್ನು ಇಲ್ಲಿ ಹೇಳಬೇಕಿದೆ.

18. ಆದಾಗ್ಯೂ, ವರದಿಯನ್ನು ತಂತಾನೇ ವರದಿಯ ವಿಷಯಗಳಿಗೆ ಪುರಾವೆಯಾಗಿ ವರದಿ ಮಾಡಲಾಗುವುದಿಲ್ಲ ಮತ್ತು ನ್ಯಾಯಾಲಯವು ಸ್ವತಃ ತಾನಾಗಲೀ ಅಥವಾ ನ್ಯಾಯಾಲಯದ ಅನುಮತಿಯೊಂದಿಗೆ, ದಾವೆಯ ಯಾರೇ ಪಕ್ಷಕಾರರಾಗಲೀ, ವರದಿಯಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯಗಳು ಅಥವಾ ಅವರು ತನಿಖೆ ನಡೆಸಿದ ವಿಧಾನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ತಜ್ಞರನ್ನು ಖುದ್ದಾಗಿ ವಿಚಾರಣೆಗೊಳಪಡಿಸಬಹುದು.

19. ಹೀಗಾಗಿ, ಬೆರಳು ಮುದ್ರಣ ತಜ್ಞರ ಸಹಿ ನೈಜವಾದುದೇ?ಅಥವಾ ಅಲ್ಲವೇ?ಎಂದು ತನಿಖೆ ನಡೆಸಲು ತನಗೆ ನೀಡಿದ ನಿರ್ದೇಶನಕ್ಕೆ ಅನುಗುಣವಾಗಿ ತಮ್ಮ ವರದಿಯನ್ನು ಸಲ್ಲಿಸಿದಾಗಲೆಲ್ಲಾ ಆ ವರದಿಯೇ ಸ್ವತಃ ದಾವೆಯಲ್ಲಿ ಸಾಕ್ಷಿಯಾಗುತ್ತದೆ ಮತ್ತು ತಮ್ಮ ವರದಿಯಲ್ಲಿ ಉಲ್ಲೇಖಿಸಲಾದ ಯಾವುದೇ ವಿಷಯಗಳಿಗೆ ಅಥವಾ ಅವರು ತನಿಖೆಯನ್ನು ನಡೆಸಿದ ವಿಧಾನಕ್ಕೆ ಸಂಬಂಧಿಸಿದಂತೆ ನ್ಯಾಯಾಲಯವು ಸ್ವತಃ ತಾನೇ ಆಗಲಿ ಅಥವಾ ನ್ಯಾಯಾಲಯದ ಅನುಮತಿಯೊಂದಿಗೆ ದಾವೆಯ ಯಾರೇ ಪಕ್ಷಕಾರರಾಗಲಿ ಅವರನ್ನು ಖುದ್ದಾಗಿ ವಿಚಾರಣೆಗೆ ಒಳಪಡಿಸಬಹುದು.ಹೀಗಾಗಿ, ದಾವೆಗೆ ಸಂಬಂಧಿಸಿದ ಪಕ್ಷಕಾರರು ವರದಿಯಲ್ಲಿ ಯಾವುದೇ ಅನುಮಾನಗಳನ್ನು ಹೊಂದಿದ್ದರೆ, ಅವರು ನ್ಯಾಯಾಲಯದ ಅನುಮತಿಯೊಂದಿಗೆ ತಜ್ಞರನ್ನು ವಿಚಾರಣೆಗೊಳಪಡಿಸಬಹುದು ಮತ್ತು ಅವರ ವರದಿಗೆ ಸಂಬಂಧಿಸಿದಂತೆ ಅವರು ಸೂಕ್ತವೆಂದು ಭಾವಿಸುವಂತಹ ಪ್ರಶ್ನೆಗಳನ್ನು ಕೇಳಬಹುದು.

20. ಒಬ್ಬ ವ್ಯಕ್ತಿಯು ತಜ್ಞರ ವರದಿಯ ಬಗ್ಗೆ ಯಾವುದೇ ಸಂದೇಹಗಳನ್ನು ಹೊಂದಿ, ತಜ್ಞರನ್ನು ವಿಚಾರಣೆಗೊಳಪಡಿಸಲು ನ್ಯಾಯಾಲಯದ ಅನುಮತಿಯನ್ನು ಕೋರಲು ವಿಫಲನಾದರೆ, ಆನಂತರ ಅವರು ವರದಿಯನ್ನು ನಿರ್ಲಕ್ಷಿಸಬೇಕಾಗಿದೆ ಅಥವಾ ಬಿಟ್ಟುಬಿಡಬೇಕಾಗಿದೆ ಎಂದು ವಾದಿಸಲು ಸಾಧ್ಯವಿಲ್ಲ.

21. ಆಯುಕ್ತರ ವರದಿಯ ಬಗ್ಗೆ ಅನುಮಾನಗಳನ್ನು ಹೊಂದಿದ ಪಕ್ಷಕಾರನು ವರದಿಗೆ ಕೇವಲ ಆಕ್ಷೇಪಣೆಗಳನ್ನು ಸಲ್ಲಿಸುವ ಮೂಲಕ ವರದಿಯ ಪರಿಣಾಮವನ್ನು ದೂರವಿಡಲು ಸಾಧ್ಯವಿಲ್ಲ ಮತ್ತು ಆಯುಕ್ತರನ್ನು ಖುದ್ದಾಗಿ ವಿಚಾರಣೆ ಮಾಡಲಾಗಿಲ್ಲ ಎಂಬ ಕಾರಣಕ್ಕೆ ವರದಿಯನ್ನು ನಿರ್ಲಕ್ಷಿಸಬೇಕಾಗಿದೆ ಎಂದು ವಾದಿಸಲಾಗುವುದಿಲ್ಲ.

22. ನ್ಯಾಯಾಲಯದ ಆಜ್ಞೆಯ ಮೇರೆಗೆ ಅಥವಾ ದಾವೆಯ ಯಾರೇ ಪಕ್ಷಕಾರರ ಕೋರಿಕೆಯ ಮೇರೆಗೆ ಆಯುಕ್ತರನ್ನು ವಿಚಾರಣೆಗೆ ಒಳಪಡಿಸಬಹುದು ಎಂದು ಇಲ್ಲಿ ಹೇಳಬೇಕು.ಆದಾಗ್ಯೂ, ವರದಿಯನ್ನು ಸಲ್ಲಿಸಿದ ಪ್ರತಿಯೊಬ್ಬ ತಜ್ಞರನ್ನು ಖುದ್ದಾಗಿ ಕಡ್ಡಾಯವಾಗಿ ವಿಚಾರಣೆ ಮಾಡುವ ಅಗತ್ಯವಿದೆ ಎಂದು ಇದರ ಅರ್ಥವಲ್ಲ ಮತ್ತು ಆ ಮೂಲಕ ಆಯುಕ್ತರನ್ನು ವಿಚಾರಣೆ ಮಾಡದಿದ್ದರೆ ವರದಿಯ ಸ್ಪಷ್ಟ ಮೌಲ್ಯವು ಕಳೆದುಹೋಗುತ್ತದೆ ಎಂಬ ಊಹೆಗೆ ಇದು ಅವಕಾಶ ನೀಡುವುದಿಲ್ಲ.

23. ಪ್ರಸಕ್ತ ಮೊಕದ್ದಮೆಯಲ್ಲಿ, ಅಪ್ಪಯ್ಯ ಮತ್ತು ದಾವೆಯಲ್ಲಿ ಅವನನ್ನು ೨ ಬೆಂಬಲಿಸಿರುವ ಅವನ ಸಹೋದರ 3 ನೇ ಪ್ರತಿವಾದಿಯ ಸೂಚನೆಯ ಮೇರೆಗೆ ಬೆರಳು ಮುದ್ರಣ ತಜ್ಞರನ್ನು ನೇಮಿಸಲಾಯಿತು ಮತ್ತು ಅವರು ವಾದಿಯ ಮತ್ತು 3 ನೇ ಪ್ರತಿವಾದಿಯ ಸಹಿಗಳನ್ನು ಸಂಗ್ರಹಿಸಿದ್ದರು ಮತ್ತು ಆ ನಂತರ ಅವರು ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ನಿಶಾನೆ ಡಿ .1 ರಲ್ಲಿ ಕಂಡುಬರುವ ಸಹಿಗಳು ನಿಜಕ್ಕೂ ವಾದಿಯ ಮತ್ತು 3 ನೇ ಪ್ರತಿವಾದಿಯ ಸಹಿಗಳಾಗಿವೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ ಎಂಬ ಬಗ್ಗೆ ಯಾವುದೇ ವಿವಾದವಿಲ್ಲ.ಹೀಗಾಗಿ, ತಜ್ಞರ ವರದಿಯ ಪ್ರಕಾರ, ವಾದಿ ಮತ್ತು 3 ನೇ ಪ್ರತಿವಾದಿಯು ನಿಶಾನೆ ಡಿ .1 ವಿಭಜನಾ ಪತ್ರಕ್ಕೆ ಸಹಿ ಹಾಕಿದ್ದಾರೆ ಎಂಬುದು ಸ್ಪಷ್ಟವಾಗಿದೆ ಮತ್ತು ಇದು ಅವರು ಸ್ವತ್ತು ವಿಭಜನೆಯಾಗಿರುವ ಅಂಶವನ್ನು ಮರೆಮಾಚಿದ್ದಾರೆ ಎಂಬುದನ್ನು ಸೂಚಿಸುತ್ತದೆ.

24. ತಜ್ಞರನ್ನು ಪಾಟಿ ಸವಾಲಿಗೆ ಒಳಪಡಿಸದಿರುವುದರಿಂದ ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ ಎಂದು ಅಪೀಲುದಾರರ ಪರ ಮಾನ್ಯ ವಕೀಲರು ವಾದಿಸಿದ್ದಾರೆ ಮತ್ತು ಮಾನ್ಯ ವಕೀಲರ ಪ್ರಕಾರ, ಈ ಬೆರಳು ಮುದ್ರಣ ತಜ್ಞರಿಗೆ ಸಮನ್ನು ಕಳಿಸಿದ ಹೊರತು ವರದಿಯನ್ನು ಅವಲಂಬಿಸಲಾಗುವುದಿಲ್ಲ.

25. ಮೊದಲೇ ಹೇಳಿದಂತೆ, ವಾದಿ ಮತ್ತು 3 ನೇ ಪ್ರತಿವಾದಿಯ ಕೋರಿಕೆಯ ಮೇರೆಗೆ ಬೆರಳು ಮುದ್ರಣ ತಜ್ಞರನ್ನು ನೇಮಕ ಮಾಡಿರುವುದರಿಂದ, ಬೆರಳು ಮುದ್ರಣ ತಜ್ಞರನ್ನು ಪರೀಕ್ಷಿಸಲು ಅಥವಾ ಅವರಿಗೆ ಸಮನ್ಸ್ ಕಳಿಸಲು ಹಾಗೂ ನಿ ಬೆರಳು ಮುದ್ರೆಗೆ ಸಂಬಂಧಿಸಿದಂತೆ ಆ ತಜ್ಞರನ್ನು ಪಾಟೀ ಸವಾಲು ಮಾಡಲು ವಾದಿಗೆ ಮತ್ತು 3 ನೇ ಪ್ರತಿವಾದಿಗೆ ಅವಕಾಶವಿತ್ತು.ಆದಾಗ್ಯೂ, ವಾದಿ ಮತ್ತು 3 ನೇ ಪ್ರತಿವಾದಿಯು ಈ ಕ್ರಮವನ್ನು ಅಂಗೀಕರಿಸದಿರಲು ನಿರ್ಧರಿಸಿದರು ಮತ್ತು ಕಾನೂನಿನಲ್ಲಿ ಅವರಿಗೆ ಲಭ್ಯವಿರುವ ಆಯ್ಕೆಯನ್ನು ಬಳಸದಿರುವ ಆಯ್ಕೆಯನ್ನು ಅವರು ಆರಿಸಿಕೊಂಡಿದ್ದರಿಂದ, ಅವರು ಬೆರಳು ಮುದ್ರಣ ತಜ್ಞರ ಅಭಿಪ್ರಾಯವನ್ನು ನಿರ್ಲಕ್ಷಿಸಬೇಕು ಎಂದು ವಾದಿಸಲು ಅವರಿಗೆ ಅನುಮತಿ ನೀಡಲಾಗುವುದಿಲ್ಲ.

26. ತಜ್ಞರು ನೀಡಿದ ಸಾಕ್ಷ್ಯವು ಕೇವಲ ಸಲಹೆಯ ಸ್ವರೂಪದ್ದಾಗಿರುವುದರಿಂದ ಬೆರಳು ಮುದ್ರಣ ತಜ್ಞರ ವರದಿಯು ನಿರ್ಣಾಯಕವಾಗಿಲ್ಲ ಎಂದು ವಾದಿಸಲು, ಅಪೀಲುದಾರರ ಪರ ಹಾಜರಾದ ಮಾನ್ಯ ವಕೀಲರು ರಮೇಶ್ಚಂದ್ರ ಅಗ್ರವಾಲ್ -ವಿರುದ್ಧ-ರೀಜೆನ್ಸಿ ಹಾಸ್ಪಿಟಲ್ ಅಮಿಟೆಡ್ ಹಾಗೂ ಇತರರು ' ಮೊಕದ್ದಮೆಯಲ್ಲಿ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಅವಲಂಬಿಸಿದ್ದಾರೆ.ತಜ್ಞರ ಚ ಸಾಕ್ಷ್ಯವು ನಿರ್ಣಾಯಕವಾಗಿಲ್ಲ ಎಂಬುದು ನಿಸ್ಸಂದೇಹವಾಗಿ ನಿಜವಾದರೂ, ವೈಜ್ಞಾನಿಕ ಮಾನದಂಡಗಳನ್ನಾಧರಿಸಿದ ಅವರ ತೀರ್ಮಾನಗಳ ನಿಖರತೆಯಿಂದ ನ್ಯಾಯಾಧೀಶರಿಗೆ ನ್ಯಾಯಯುತ ಮತ್ತು ಸರಿಯಾದ ತೀರ್ಮಾನಕ್ಕೆ ಬರಲು ಅದರಲ್ಲೂ ನಿರ್ದಿಷ್ಟವಾಗಿ, ಸಹಿಯ ನೈಜತೆಯನ್ನು ಖಚಿತಪಡಿಸಿಕೊಳ್ಳುವ ಸಂದರ್ಭದಲ್ಲಿ ಒಂದು ಅಮೂಲ್ಯ ಸಾಧನವಾಗುತ್ತದೆ.ಹಾಗಾಗಿ, ಈ ತೀರ್ಪು ಆಯುಕ್ತರನ್ನು ವಿಚಾರಣೆಗೆ ಒಳಪಡಿಸದಿದ್ದರೆ, ಅವರ ವರದಿಯನ್ನು ನಿರ್ಲಕ್ಷಿಸಬೇಕು ಎಂಬ ಅಪೀಲುದಾರನ ವಾದವನ್ನು ಸಮರ್ಥಿಸುವುದಿಲ್ಲ.

27. ಆಯುಕ್ತರನ್ನು ವಿಚಾರಣೆ ಮಾಡುವುದು ಅಗತ್ಯವಾಗಿತ್ತು, ಅದಕ್ಕೆ ತಪ್ಪಿದಲ್ಲಿ, ಆಯುಕ್ತರ ವರದಿಯನ್ನು ಬಿಟ್ಟುಬಿಡಬೇಕಾಗಿರುತ್ತದೆ ಎಂದು ವಾದಿಸಲು, ಮಾನ್ಯ ವಕೀಲರು ಪರಪ್ಪ ಮತ್ತು ಇತರರು -ವಿರುದ್ಧ- – ಭೀಮಪ್ಪ ಮತ್ತು ಇನ್ನೊಬ್ಬರು ಮೊಕದ್ದಮೆಯಲ್ಲಿ ಈ ನ್ಯಾಯಾಲಯದ ತೀರ್ಪನ್ನು ಸಹ ಅವಲಂಬಿಸಿದ್ದಾರೆ.ನನ್ನ ಅಭಿಪ್ರಾಯದಲ್ಲಿ ಈ ನ್ಯಾಯಾಲಯವು ಅಂತಹ ಕಾನೂನಿನ ಪ್ರಸ್ತಾವವನ್ನು ಮಂಡಿಸಿಲ್ಲ.ವಾಸ್ತವವಾಗಿ, ಈ ನ್ಯಾಯಾಲಯವು, ದಾವೆಯ ಎರಡೂ ಪಕ್ಷಕಾರರು ನ್ಯಾಯಾಲಯದ ಅನುಮತಿಯೊಂದಿಗೆ ಆಯುಕ್ತರನ್ನು ವಿಚಾರಣೆ ಮಾಡಬಹುದು ಎಂದು ತೀರ್ಮಾನಿಸಿದೆ ಮತ್ತು ಆದ್ದರಿಂದ, ಆಯುಕ್ತರ ವರದಿಗೆ ಆಕ್ಷೇಪಣೆಗಳನ್ನು ಸಲ್ಲಿಸಿದಾಗಲೆಲ್ಲಾ ಅವರನ್ನು ತಾನಾಗಿಯೇ ವಿಚಾರಣೆ ಮಾಡುವ ಅಗತ್ಯವಿಲ್ಲ ಎಂದು ಹೇಳಿದೆ.

28. ನನ್ನ ಅಭಿಪ್ರಾಯದಲ್ಲಿ, ವಾದಿ ಮತ್ತು 3 ನೇ ಪ್ರತಿವಾದಿಯು, ವಿಭಜನಾ ಪತ್ರ ನಿಶಾನೆ ಡಿ .1 ನ್ನು ಕಾರ್ಯಗತಗೊಳಿಸಿದ್ದಾರೆಯೇ?ಎಂಬ ಸಂಗತಿಯು ಮೂಲಭೂತ ಪ್ರಶ್ನೆಯಾಗಿದ್ದು, ಅದನ್ನು ಅಪೀಲು ನ್ಯಾಯಾಲಯವು ನಿರ್ಧರಿಸಿದೆ ಮತ್ತು ಸಂಗತಿಗಳ ಗುಣಾವಗುಣಗಳ ಮರು ವಿವೇಚನೆ ಮಾಡಿದ ತರವಾಯ, ವಾದಿ ಮತ್ತು 3 ನೇ ಪ್ರತಿವಾದಿಯು ವಿಭಜನಾ ಪತ್ರಕ್ಕೆ ನಿಜವಾಗಿಯೂ ಸಹಿ ಹಾಕಿದ್ದಾರೆ ಮತ್ತು ಆದ್ದರಿಂದ, ಸಿವಿಲ್ ಪ್ರಕ್ರಿಯಾ ಸಂಹಿತೆಯ 100 ನೇ ಪ್ರಕರಣದ ಅಡಿಯಲ್ಲಿ ಹಸ್ತಕ್ಷೇಪ ಮಾಡಲು ಯಾವುದೇ ಅವಕಾಶವಿಲ್ಲ ಎಂದು ಅದು ತೀರ್ಮಾನಿಸಿದೆ.

29. ವಿಭಜನೆಯನ್ನು ಕಾರ್ಯಗತಗೊಳಿಸಿರುವುದನ್ನು ನಿರಾಕರಿಸಿರುವ ಹಿನ್ನೆಲೆಯಲ್ಲಿ, ವಿಭಜನಾ ಪತ್ರ ಕಾರ್ಯಗತಗೊಂಡಿರುವುದನ್ನು ಸಾಬೀತುಪಡಿಸಲು ವಿಭಜನಾ ಪತ್ರದ ಸಾಕ್ಷಿಗಳನ್ನು ವಿಚಾರಣೆ

ಮಾಡಬೇಕಾಗಿತ್ತು ಎಂಬ ವಾದದ ಮಟ್ಟಿಗೆ, ವಿಭಜನಾ ಪತ್ರವು ಒಂದು ದಾಖಲೆಯಾಗಿದ್ದು, ಅದನ್ನು ಕಾನೂನಿನಿಂದ ದೃಢೀಕರಿಸುವ ಅಗತ್ಯವಿಲ್ಲ ಮತ್ತು ಹೀಗಾಗಿ, ಕಾರ್ಯಗತಗೊಳಿಸಿರುವುದನ್ನು ಸಾಬೀತುಪಡಿಸಲು ಸಾಕ್ಷಿಗಳನ್ನು ವಿಚಾರಣೆ ಮಾಡುವುದು ಕಡ್ಡಾಯವಲ್ಲ ಎಂದು ಇಲ್ಲಿ ಹೇಳಬೇಕಾಗಿದೆ.

30. ಆದ್ದರಿಂದ, ಇದರಲ್ಲಿ ಯಾವುದೇ ಕಾನೂನಿನ ಪ್ರಶ್ನೆ ಇಲ್ಲ. ಈ ಅಪೀಲಿನಲ್ಲಿ ಪರಿಗಣನೆಗಾಗಿ ಉದ್ಭವಿಸುವ ಕಾನೂನಿನ ಮುಖ್ಯ ಪ್ರಶ್ನೆಯು ನಗಣ್ಯವಾಗಿದೆ.ಅದರಂತೆ, ಈ ಅಪೀಲನ್ನು ವಜಾಗೊಳಿಸಲಾಗಿದೆ.